ವಿಷಯ:- ಮಡಿಕೇರಿ ಡಿಪೋದಲ್ಲಿರುವ ಬಸ್ಸುಗಳ ಸಂಖ್ಯೆ.

1416 (2263) (ಎ) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಡಿಕೇರಿ ಡಿಪೋದಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು, ಅವು ಯಾವ ಯಾವ ಮಾಡಲ್ಲುಗಳು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಮಂಗಳೂರು ವಿಭಾಗದ ಮಡಿಕೇರಿ ಘಟಕದಲ್ಲಿ 75 ಅನುಸೂಚಿಗಳಿಗೆ 80 ಟಾಟಾ ಮಾದರಿಯ ವಾಹನಗಳನ್ನು ಹೊಂದಿ ಕಾರ್ಯಚರಣೆ ಮಾಡುತ್ತಿವೆ.

ವಿಷಯ:- ಬರ ಸಂಭವನೀಯ ಪ್ರದೇಶಗಳು.

1471 (2089) ಶ್ರೀ ಡಿ.ಆರ್. ಪಾಟೀಲ್ (ಗದಗ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಬರ ಸಂಭವನೀಯ ಪ್ರದೇಶ ಎಷ್ಟು?

ಆ) ಇದು ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇಕಡಾ ಎಷ್ಟು ಆಗುತ್ತದೆ?

ಇ) ಮಳೆ ಆಧಾರಿತ ಕೃಷಿಯಲ್ಲಿ ತೊಡಗಿರುವ ರೈತರ ಉತ್ಪಾದನೆ ಹಾಗೂ ಆದಾಯ ಹೆಚ್ಚಿಸಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಂಡಿರುವರು?

ಈ) ಬರ ಸಂಭವನೀಯ ಪ್ರದೇಶದಲ್ಲಿ ಬೀಳುವ ಮಳೆ ನೀರು ಇಂಗುವಂತೆ ಮಾಡಲು ಭೂಸಾರ ಸಂರಕ್ಷಣೆ ಮಾಡಲು ಸರ್ಕಾರ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹೊಂದಿರುವ ಯೋಜನೆಗಳಾವುವು ಹಾಗೂ ಅದಕ್ಕೆ ಮೀಸಲಿರಿಸಲಾದ ಹಣ ಎಷ್ಟು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):-

ಅ) ರಾಜ್ಯದಲ್ಲಿರುವ ಬರ ಸಂಭವನೀಯ ಭೌಗೋಳಿಕ ವಿಸ್ತೀರ್ಣ 125.41 ಲಕ್ಷ ಹೆಕ್ಟೇರುಗಳು.

ಆ) ಇದು ರಾಜ್ಯದ ಒಟ್ಟು ಭೌಗೋಳಿಕ ವಿಸ್ತಾರದ ಶೇಕಡ 65.83 ಆಗುತ್ತದೆ.

ಇ) ಮಳೆ ಆಧಾರಿತ ಕೃಷಿಯಲ್ಲಿ ತೊಡಗಿರುವ ರೈತರ ಉತ್ಪಾದನೆ ಹಾಗೂ ಆದಾಯ ಹೆಚ್ಚಿಸಲು ಕೃಷಿ ಇಲಾಖೆವತಿಯಿಂದ ಜಲಾನಯನ ಪ್ರದೇಶದ ಆಧಾರದ ಮೇಲೆ ಮಣ್ಣು ಮತ್ತು ನೀರು ಸಂರಕ್ಷಣೆ ಕೃಷಿ ಅರಣ್ಯ, ಖುಷ್ಕಿ ತೋಟಗಾರಿಕೆ ಮೇವು ಉತ್ಪಾದನೆ ಹಾಗೂ ಸುಧಾರಿತ ಖುಷ್ಕಿ ಬೇಸಾಯದಲ್ಲಿ ತಂತ್ರಜ್ಞಾನ ಬಳಸುವಿಕೆ ಪ್ರಾತ್ಯಕ್ಷತೆ, ರಿಯಾಯಿತಿ ದರದಲ್ಲಿ ಕೃಷಿ ಸಾಮಗ್ರಿಗಳ ವಿತರಣೆ ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.